<u>2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,</u>
<u>ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).</u>
<u>ಎಸ್.ಸಿ. ನಂ. 5017/2022</u>

ಪ್ರಾ.ಸಾ ಃ 2

ಚಾಸಾ ಃ 5

ಸಾಕ್ಷಿಯ ಹೆಸರು ಃ ಮಂಜು

ತಂದೆಯ ಹೆಸರುಃ ಕುಳಿಯಾ

ವಯಸ್ಸು ಃ 22 ವರ್ಷ

ವೃತ್ತಿ ಃ ಕೂಲಿ ಕೆಲಸ

ವಿಳಾಸ ಃ ಶೆಟ್ಟಿಗೇರಿ ಗ್ರಾಮ

ದಿಃ 09.07.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ</u>

1. ಚಾಸಾ 1 ನನ್ನ ಅತ್ತಿಗೆ, ಮೃತ ಚಿಮ್ಮಿ ನನ್ನ ತಂದೆಯ 2 ನೇ ಪತ್ನಿ. ಚಿಮ್ಮಿ ಯವರು ಬಾಡಗದಲ್ಲಿ ವಾಸವಾಗಿದ್ದರು. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಯ ಇಲ್ಲ. ಈಗ್ಗೆ 2 ವರ್ಷಗಳ ಹಿಂದೆ ಚಿಮ್ಮಿಯವರು ಅವರು ವಾಸವಾಗಿದ್ದ ಲೈನ್ ಮನೆಯಲ್ಲಿ ಮೃತಪಟ್ಟಿದ್ದರು. ನಾನು ತೋಟಕ್ಕೆ ನೀರು ಹಾಯಿಸುವ ಕೆಲಸಕ್ಕೆ ಹೋಗಿ ವಾಪಸ್ಸು ಬಂದು ಚಿಮ್ಮಿ ವಾಸವಾಗಿದ್ದ ಲೈನ್ ಮನೆಗೆ ಬಂದು ನೋಡಿದಾಗ ಚಿಮ್ಮಿ ಆಕೆಯ ಕೋಣೆಯ ಮಲಗಿದ ಸ್ಥಿತಿಯಲ್ಲಿ ಇದ್ದು ಆಕೆಯ ಕುತ್ತಿಗೆಯ ಭಾಗದಲ್ಲಿ ಕಡಿದ ಗಾಯ ಇತ್ತು, ಕುತ್ತಿಗೆಗೆ ಬಟ್ಟೆ ಸುತ್ತಿದ್ದು ಕಾಣಿಸುತ್ತಿತ್ತು. ಆಕೆ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ನಂತರ ನಾನು ಚಾಸಾ 1 ರವರಿಗೆ ಫೋನ್ ಮಾಡಿ ವಿಷಯ ತಿಳಿಸಿದೆ. ಚಾಸಾ 1 ರವರು ಬಂದು ಚಿಮ್ಮಿಯನ್ನು ಆಸ್ಪತ್ರೆಗೆ ಕರೆದುಕೊಂಡು

ಹೋಗಿದ್ದರು. ಚಾಸಾ 1 ರವರು ಬಂದು ಚಿಮ್ಮಿ ರವರ ಬಳಿ ಈ ರೀತಿ ಯಾರು ಮಾಡಿದ್ದಾರೆ ಎಂದು ವಿಚಾರಿಸಿರಲಿಲ್ಲ. ಚಿಮ್ಮಿರವರು ಚಾಸಾ 1 ರವರಿಗೆ ಕೈಸನ್ನೆಯಲ್ಲಿ ರಸ್ತೆ ಕಡೆ ಸನ್ನೆ ಮಾಡಿ ತೋರಿಸಿದ್ದರು. ಚಿಮ್ಮಿ ಚಾಸಾ 1 ರವರ ಬಳಿ ಯಾರ ಹೆಸರನ್ನು ಹೇಳಿರಲಿಲ್ಲ. ಚಾಸಾ 1 ರವರು ಚಿಮ್ಮಿ ರವರನ್ನು ಮೈಸೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ಗೊತ್ತಾಯಿತು ಹಾಗೂ ಅವರು ಆ ಆಸ್ಪತ್ರೆಯಲ್ಲಿ ಮೃತಪಟ್ಟರು ಎಂದು ಗೊತ್ತಾಯಿತು.

2. ನಂತರ ಪೊಲೀಸರು ಚಿಮ್ಮಿ ವಾಸವಾಗಿದ್ದ ಲೈನ್ ಮನೆಯ ಬಳಿ ಬಂದು ಒಂದು ದಾಖಲೆಗೆ ನನ್ನ ಸಹಿಯನ್ನು ಪಡೆದುಕೊಂಡಿದ್ದರು. ನಾನು ಪೊಲೀಸರಿಗೆ ಚಿಮ್ಮಿ ವಾಸವಾಗಿದ್ದ ಲೈನ್ ಮನೆಯನ್ನು ತೋರಿಸಿದ್ದೆ. ಪೊಲೀಸರು ಅಲ್ಲಿ ಫೋಟೋ ತೆಗೆದರು. ಅಲ್ಲಿ ರಕ್ತ ಬಿದ್ದಿತ್ತು, ಪೊಲೀಸರು ಅದನ್ನು ಸಂಗ್ರಹಿಸಿದ್ದರು ಹಾಗೂ ರಕ್ತದ ಕಲೆ ಇದ್ದ ಒಂದು ಬಟ್ಟೆಯನ್ನು ಜಪ್ತು ಮಾಡಿದ್ದರು. ನಾನು ಸಹಿ ಮಾಡಿದಂತಹ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 5 ಎಂದು ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು. ನಿಪಿ 5 ಮಹಜರು ಮಾಡುವ ಸಮಯದಲ್ಲಿ ತೆಗೆದಂತಹ ಛಾಯಚಿತ್ರಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ 6 ಹಾಗೂ 7 ಎಂದು ಗುರುತಿಸಲಾಯಿತು.

(ಸೀಲಾದ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

3. ಸೀಲಾದ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಿದಾಗ ಅದರಲ್ಲಿ ಬಟ್ಟೆ ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು ಮಾ 2 ಎಂದು ಗುರುತಿಸಲಾಯಿತು.

4. ಚಿಮ್ಮಿ ಯವರನ್ನು ಯಾರು ಕೊಲೆ ಮಾಡಿದ್ದಾರೆ ಎಂದು ನನಗೆ ಗೊತ್ತಾಗಲಿಲ್ಲ. ಆರೋಪಿಗಳು ಚಿಮ್ಮಿ ಯವರನ್ನು ಕೊಲೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಆರೋಪಿಗಳ ವಿರುದ್ಧ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

5. ದಿಃ 03.03.2022 ರಂದು ನಾನು ಹಾಗೂ ನನ್ನ ತಂದೆ ಪೂಣಚ್ಚರವರ ತೋಟಕ್ಕೆ ಹೋಗಿ ನೀರು ಹಾಯಿಸುವ ಕೆಲಸ ಮಾಡಿ ಮಃ 12.00 ಗಂಟೆಗೆ ನನ್ನ ತಂದೆ ಚಿಮ್ಮಿ ಯವರನ್ನು ಕರೆದುಕೊಂಡು ಬರುವ ಸಲುವಾಗಿ ಹೋಗಿದ್ದು, ಅವರು ಹೋದಾಗ ಚಿಮ್ಮಿ ಕಾಣದೇ ಇದ್ದಾಗ ಮನೆಯ ಹಿಂಭಾಗಕ್ಕೆ ಹೋಗಿ ನೋಡಿದ್ದು, ಆಕೆ ಮಲಗಿಸಿದ ಸ್ಥಿತಿಯಲ್ಲಿ ಇದ್ದು ಆಕೆಯ ಕುತ್ತಿಗೆಯ ಬಳಿ ರಕ್ತ ಗಾಯವಾಗಿ ರಕ್ತ ಬರುತ್ತಿದ್ದು,

ಮಾತನಾಡಿಸಿದಾಗ ಸರಿಯಾಗಿ ಮಾತನಾಡದೇ ಇದ್ದರಿಂದ ಲೈನ್ ಮನೆಯಲ್ಲಿ ಮಲಗಿಸಿ ಬಂದಿರುವುದಾಗಿ ನನ್ನ ತಂದೆ ನನ್ನ ಬಳಿ ಹೇಳಿರುತ್ತಾರೆ ಎಂದರೆ ಸರಿ. ನಾನು, ನನ್ನ ಸಾಹುಕಾರರು ಹಾಗೂ ನನ್ನ ತಂದೆ ಲೈನ್ ಮನೆಗೆ ಹೋಗಿ ಚಿಮ್ಮಿಯವರನ್ನು ಮಾತನಾಡಿಸಿದಾಗ ಸರಿಯಾಗಿ ಮಾತನಾಡದೇ ಮಲಗುವ ಕೋಣೆಯನ್ನು ತೋರಿಸಿ ಇಲ್ಲಿ ಇಬ್ಬರು ಕುತ್ತಿಗೆಗೆ ಕಡಿದಿರುವುದಾಗಿ ಕೈ ಸನ್ನೆಯನ್ನು ಮಾಡಿ ತೋರಿಸಿದರು ಎಂದರೆ ಸರಿ. ತೊದಲುತ್ತ ಮಂಜು ಎಂದು ಹೇಳಿದ್ದರು ಎಂದರೆ ಸರಿಯಲ್ಲ.

6. ದಿಃ 04.03.2022 ರಂದು ಮಃ 11.00 ಗಂಟೆಯ ಸುಮಾರಿಗೆ ಪೊಲೀಸರು ಪೂಣಚ್ಚರವರ ಲೈನ್ ಮನೆಗೆ ಬಂದಿದ್ದು ಅಲ್ಲಿಗೆ ಚಂಗಪ್ಪ ಹಾಗೂ ಪೆಮ್ಮಯ್ಯರವರನ್ನು ಕರೆಸಿ ಅವರ ಸಮಕ್ಷಮ ಸ್ಥಳ ಮಹಜರನ್ನು ಮಾಡಿದ್ದರು ಎಂದರೆ ಸರಿ. ಚಿಮ್ಮಿ ಗಂಟಲಿಗೆ ಸುತ್ತಿಕೊಂಡಿದ್ದ ಬಟ್ಟೆಯನ್ನು ಮಹಜರು ಸಮಯದಲ್ಲಿ ಪೊಲೀಸರಿಗೆ ನಾನು ನೀಡಿದ್ದೆ ಎಂದರೆ ಸರಿ. ಸದರಿ ಬಟ್ಟೆಯನ್ನು ಪೊಲೀಸರು ಪ್ಯಾಕ್ ಮಾಡಿ ಸೀಲ್ ಮಾಡಿ ಜಪ್ತು ಮಾಡಿಕೊಂಡು ಮಹಜರನ್ನು ಸ್ಥಳದಲ್ಲೇ ತಯಾರಿಸಿ ನನ್ನ ಸಹಿಯನ್ನು ಪಡೆದುಕೊಂಡಿದ್ದರು ಎಂದರೆ ಸರಿ.

7. ನಂತರ ದಿಃ 07.03.2022 ರಂದು ಚಿಮ್ಮಿಯವರು ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು ಪೊಲೀಸರು ಕೊಲೆ ಕೇಸನ್ನು

ದಾಖಲಿಸಿಕೊಂಡಿದ್ದು ದಿಃ 09.03.2022 ರಂದು ರಾತ್ರಿ ವಿ ಬಾಡಗ ಗ್ರಾಮದ ಸುರೇಶ್ ಹಾಗೂ ಸುಬ್ರಮಣಿ ರವರನ್ನು ದಸ್ತಗಿರಿ ಮಾಡಿ ವಿಚಾರಣೆ ಮಾಡಿದಾಗ ಅವರಿಬ್ಬರೂ ಸೇರಿಕೊಂಡು ನನ್ನ ಚಿಕ್ಕಮ್ಮ ಚಿಮ್ಮಿರವರನ್ನು ಅತ್ಯಾಚಾರ ಮಾಡುವ ಉದ್ದೇಶದಿಂದ ದಿಃ 02.03.2022 ರಂದು ರಾತ್ರಿ 11.00 ಗಂಟೆಯ ಸುಮಾರಿಗೆ ಆಕೆ ವಾಸವಿದ್ದ ಲೈನ್ ಮನೆಗೆ ಹೋಗಿ ಮಲಗಿದ್ದ ಆಕೆಯ ಮೇಲೆ ಅತ್ಯಾಚಾರ ಮಾಡಲು ಪ್ರಯತ್ನಿಸಿದ್ದು ಆಕೆ ವಿರೋಧ ಮಾಡಿದ್ದರಿಂದ ಆಕೆಯನ್ನು ಕೊಲೆ ಮಾಡುವ ಉದ್ದೇಶದಿಂದ ಕತ್ತಿಯಿಂದ ಗಂಟಲಿಗೆ ಕಡಿದು ಆರೋಪಿಗಳು ಕೊಲೆ ಮಾಡಿರುವ ವಿಷಯ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಪೊಲೀಸರ ಸಮಕ್ಷಮ ದಿಃ 11.03.2022 ರಂದು ನನಗೆ ಈಗ ಓದಿ ಹೇಳಿದಂತೆ " ಚಿಕ್ಕಮ್ಮ ---------- ತಿಳಿಯಿತು " ಎಂದು ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರು ಹೇಳಿಕೆಯ ನಿಪಿ 8 ಎಂದು ಗುರುತಿಸಲಾಯಿತು. ನಿಪಿ 8 ರಲ್ಲಿರುವ ಎಲ್ಲ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

8. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ, ಪೊಲೀಸರು ಹೇಳಿದ ರೀತಿಯಲ್ಲಿ ಹೇಳಿರುತ್ತೇನೆ ಎಂದರೆ ಸರಿ. ನಿಪಿ 5 ಮಹಜರು ಮಾಡುವ ಸಮಯದಲ್ಲಿ ಬೇರೆ ಯಾರು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ 5 ರಲ್ಲಿ ಬರೆದಿರುವ ವಿವರ ನನಗೆ ಗೊತ್ತಿಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).
ಎಸ್.ಸಿ. ನಂ. 5017/2022

ಪ್ರಾಸಾ ಃ 3

ಚಾಸಾ ಃ 6

ಸಾಕ್ಷಿಯ ಹೆಸರು ಃ ಕೆ ಸಿ ನಂಜಪ್ಪ

ತಂದೆಯ ಹೆಸರುಃ ಕೆ ಎಸ್ ಚಿಟ್ಟಿಯಪ್ಪ

ವಯಸ್ಸು ಃ 55 ವರ್ಷ

ವೃತ್ತಿ ಃ ವ್ಯವಸಾಯ

ವಿಳಾಸ ಃ ಕೊಂಗಣ ಗ್ರಾಮ

ದಿಃ 09.07.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

1. ನನಗೆ ಕೊಂಗಣ ಗ್ರಾಮದಲ್ಲಿ ಕಾಫಿ ತೋಟ ಇದೆ. ನಾನು ಬಾಡಗ ಗ್ರಾಮದಲ್ಲಿ ಕಾಫಿ ತೋಟವನ್ನು ಪೂಣಚ್ಚರವರಿಂದ ಲೀಜ್ ಗೆ ಪಡೆದುಕೊಂಡಿದ್ದೆ. ಚಾಸಾ 5 ರವರು ನನ್ನ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದರು. ಚಾಸಾ 5 ರವರ ತಂದೆ ಕುಳಿಯ ಹಾಗೂ ಚಿಮ್ಮಿ ಪೂಣಚ್ಚ ರವರ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದರು. ಈಗ್ಗೆ ಸುಮಾರು 2 ವರ್ಷಗಳ ಹಿಂದೆ ತೋಟಕ್ಕೆ ನೀರು ಹಾಯಿಸುವ ಕೆಲಸಕ್ಕಾಗಿ ಚಾಸಾ 5 ರವರನ್ನು ಕರೆದುಕೊಂಡು ಪೂಣಚ್ಚ ರವರ ಕಾಫಿ ತೋಟಕ್ಕೆ ಹೋಗಿದ್ದೆ. ಪೂಣಚ್ಚ ರವರ ಮನೆಯ ಪಕ್ಕದಲ್ಲಿರುವ ಮನೆಯಲ್ಲಿ ವಾಸವಾಗಿರುವ ಅರಸು ಎನ್ನುವವರು ನನಗೆ ಚಿಮ್ಮಿಯ ಗಂಟಲಿನ ಬಳಿ ರಕ್ತ ಬರುತ್ತಿದೆ ಎಂದು ಹೇಳಿದರು. ನಾನು, ಮಂಜು ಹಾಗೂ ಕುಳಿಯ ಚಿಮ್ಮಿ ವಾಸವಾಗಿದ್ದ ಲೈನ್ ಮನೆಗೆ ಹೋಗಿ

ನೋಡಿದೆವು. ಆಕೆ ಲೈನ್ ಮನೆಯ ಹಿಂಭಾಗದಲ್ಲಿ ಬಿದ್ದಿದ್ದಳು. ಆಕೆಯ ಕುತ್ತಿಗೆಯ ಬಳಿ ಕಡಿದ ಗಾಯ ಕಂಡುಬಂದಿತು. ನಾನು ಆಕೆಯನ್ನು ವಿಚಾರಿಸಿದೆ, ಆಕೆ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಹಾಗೂ ಆಕೆ ಕೈ ಸನ್ನೆಯಲ್ಲಿ ಕೂಡ ಏನೂ ಹೇಳಲಿಲ್ಲ. ನಂತರ ನಾವು ಚಾಸಾ 1 ರವರಿಗೆ ಫೋನ್ ಮಾಡಿ ವಿಷಯ ತಿಳಿಸಿದ್ದು, ಆಕೆ ಬೇಗ ಬರುತ್ತೇನೆ ಎಂದು ಹೇಳಿದರು. ಒಂದು ವಾರದ ನಂತರ ಚಿಮ್ಮಿ ಮೈಸೂರಿನ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ ಎಂದು ಪೂಣಚ್ಚ ರವರು ನನಗೆ ತಿಳಿಸಿ ಆಕೆಯ ಮೃತ ದೇಹದ ಅಂತ್ಯಸಂಸ್ಕಾರ ಮಾಡಿ ನನಗೆ ಅನಾರೋಗ್ಯ ಇರುವ ಕಾರಣ ಬರಲು ಆಗುವುದಿಲ್ಲ ಎಂದು ಹೇಳಿದರು. ಚಿಮ್ಮಿಯ ಮೃತ ದೇಹವನ್ನು ಚಾಸಾ 1 ರವರು ಅಂಬುಲೆನ್ಸ್ ನಲ್ಲಿ ತಂದಿದ್ದರು. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇಲ್ಲ. ಆರೋಪಿಗಳು ಚಿಮ್ಮಿಯವರನ್ನು ಕೊಲೆ ಮಾಡಿರುವ ವಿಷಯ ನನಗೆ ಗೊತ್ತಿಲ್ಲ. ನಾನು ಆರೋಪಿಗಳ ವಿರುದ್ಧ ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

2. ದಿಃ 03.03.2022 ರಂದು ಪೂಣಚ್ಚ ರವರ ಕಾಫಿ ತೋಟಕ್ಕೆ ನೀರು ಹಾಯಿಸುವ ಸಲುವಾಗಿ ನಾನು, ಚಾಸಾ 5 ಹಾಗೂ ಕುಳಿಯ ಹೋಗಿದ್ದೆವು ಹಾಗೂ ಮಃ ಸುಮಾರು 12.00 ಗಂಟೆಗೆ ನೀರು ಹಾಯಿಸುವ ಕೆಲಸ

ಮುಗಿದಿರುತ್ತದೆ ಎಂದರೆ ಸರಿ. ನಾನು ಕುಳಿಯನ ಬಳಿ ಚಿಮ್ಮಿ ಯನ್ನು ಕರೆದುಕೊಂಡು ಬರುವಂತೆ ಹೇಳಿದ್ದು ಅದರಂತೆ ಕುಳಿಯ ಲೈನ್ ಮನೆಗೆ ಹೋಗಿ ಸ್ವಲ್ಪ ಸಮಯದ ನಂತರ ವಾಪಸ್ ಬಂದು ತಾನು ಲೈನ್ ಮನೆಗೆ ಹೋಗಿ ನೋಡಿದಾಗ ಚಿಮ್ಮಿ ಕಾಣದ್ದರಿಂದ ಮನೆಯ ಹಿಂಭಾಗದಲ್ಲಿ ಹೋಗಿ ನೋಡಿದ್ದು ಅಲ್ಲಿ ಆಕೆ ಮಲಗಿದ್ದ ಸ್ಥಿತಿಯಲ್ಲಿ ಇದ್ದು ಕುತ್ತಿಗೆಯ ಬಳಿ ರಕ್ತಗಾಯವಾಗಿ ರಕ್ತ ಬರುತ್ತಿದ್ದು, ಮಾತನಾಡಿಸಿದಾಗ ಸರಿಯಾಗಿ ಮಾತನಾಡದೇ ಇದ್ದರಿಂದ ಆಕೆಯನ್ನು ಲೈನ್ ಮನೆಯಲ್ಲಿ ಮಲಗಿಸಿ ಬಂದಿರುವುದಾಗಿ ಕುಳಿಯ ನನಗೆ ಹೇಳಿದ್ದರು ಎಂದರೆ ಸರಿಯಲ್ಲ. ನಂತರ ನಾನು ಕುಳಿಯ ಹಾಗೂ ಮಂಜು ಹೋಗಿ ಚಿಮ್ಮಿಯನ್ನು ಮಾತನಾಡಿಸಲು ಪ್ರಯತ್ನಿಸಿದಾಗ ಆಕೆ ಕೈ ಸನ್ನೆ ಮೂಲಕ ಇಬ್ಬರು ಕುತ್ತಿಗೆಗೆ ಕಡಿದಿರುವುದಾಗಿ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ತಿಳಿಯಲಾಗಿ ಸುಮಾರು 2 ತಿಂಗಳಿನಿಂದ ಮಳವಂಡ ರಾಜ ರವರ ಲೈನ್ ಮನೆಯಲ್ಲಿ ವಾಸವಾಗಿದ್ದ 1 ನೇ ಆರೋಪಿ ದಿಃ 03.03.2022 ರಂದು ರಾತ್ರಿ ಹೇಳದೇ ಮನೆ ಬಿಟ್ಟು ಹೋಗಿರುವುದಾಗಿ ರಾಜ ರವರು ಹೇಳುತ್ತಿದ್ದು 1 ನೇ ಆರೋಪಿ ಹಾಗೂ ಇನ್ನೊಬ್ಬ ಆರೋಪಿ ಸೇರಿಕೊಂಡು ಚಿಮ್ಮಿಯನ್ನು ಕೊಲೆ ಮಾಡಿರುವ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಪೊಲೀಸರ ಸಮಕ್ಷಮ ದಿಃ 09.03.2022 ರಂದು ನನಗೆ ಈಗ ಓದಿ ಹೇಳಿದಂತೆ " ನಂತರ ---------- ಸಂಶಯವಿರುತ್ತದೆ " ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ನಿಪಿ 9 ಎಂದು

ಗುರುತಿಸಲಾಯಿತು. ನಿಪಿ 9 ರಲ್ಲಿರುವ ಎಲ್ಲ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)